# ಮುಸುರೆ ಮತ್ತು ತೀರ್ಥ ಚೆಲ್ಲುವ ಆಚರಣೆಗಳು

***Dr.Gundanna.C.Kalaburgi**

ಭಾರತೀಯ ಸಮಾಜಿಕ ವ್ಯವಸ್ಥೆಯಲ್ಲಿ ಜನಪದರ ಆಚರಣೆಗಳು ತಮ್ಮದೇ ಆದ ಸಂಸ್ಕೃತಿಯನ್ನು ಹೊಂದಿವೆ. ಪ್ರಾಚೀನ ಕಾಲದಿಂದಲೂ ವಿಶಿಷ್ಠ ನಂಬಿಕೆ, ಆಚರಣೆ, ಸಂಪ್ರದಾಯ ಸಂಸ್ಕೃತಿಗಳನ್ನು ಮೈಗೂಡಿಸಿಗೊಂಡು ಸಾಂಸ್ಕೃತಿಕವಾಗಿ ಶ್ರೀಮಂತವೂ, ವೈವಿದ್ಯಮಯವೂ ಆಗಿವೆ. ಇಂತಹ ಜನಪದರ ಆಚರಣೆಗಳು ಹೊಂದಿರುವ ನಮ್ಮ ರಾಷ್ಟ್ರ ವಿಶಿಷ್ಟತೆಯನ್ನು ಹೊಂದಿ ವಿಶ್ವಪರಂಪರೆಯಲ್ಲಿ ಪ್ರಮುಖ ಸ್ಥಾನವನ್ನು ಹೊಂದಿದೆ. ಭಾರತೀಯ ಸಂಸ್ಕೃತಿಯ ಭಾಗವಾಗಿ ಇರುವ ನಮ್ಮ ಜನಪದರ ಆಚರಣೆಗಳನ್ನು ಉಳಿಸಿ–ಬೆಳೆಸುವುದು ಇಂದಿಗೆ ಬಹು ದೊಡ್ಡ ಸವಾಲಾಗಿದೆ ಪ್ರಾಚೀನ ಪರಂಪರೆಯನ್ನು ಹೊಂದಿರುವ ಆಚರಣೆಗಳು ವಿಜ್ಞಾನ, ತಂತ್ರಜ್ಞಾನ, ಜಾಗತೀಕರಣ, ನವ–ವಸಹಾತುಶಾಹಿಗಳ ಪ್ರಭಾವದಿಂದ ವಿನಾಶದ ಅಂಚಿಗೆ ಸಾಗುತ್ತಲಿವೆ. ಇಂತಹ ಸಂದಿಗ್ಧ ಪರಿಸ್ಥಿಯಲ್ಲಿ ಸಂವೇದನೆಗಳನ್ನು ಕಳೆದುಕೊಂಡ ಮನುಷ್ಯ ನೈತಿಕ ಅಧಃಪತನದ ಕಡೆಗೆ ಸಾಗುತ್ತಿರುವುದು ಶೋಚನೀಯ ಸಂಗತಿ.ಇಂತಹ ವಿಷಮ ಸಂದರ್ಭದಲ್ಲಿ ಜನಪದ ಆಚರಣೆಗಳ ಸಾಂಸ್ಕೃತಿಕ ಜೈವಿಕ ವೈಶಿಷ್ಟ್ಯತೆಗಳನ್ನು ಗುರುತಿಸುವ ಆಧ್ಯಯನಗಳನ್ನು ಕೈಗೊಳ್ಳುವುದು ಅಗತ್ಯವಷ್ಟೇ ಅಲ್ಲ ಅನಿವಾರ್ಯವೂ ಆಗಿದೆ.

ಈ ಹಿನ್ನೆಲೆಯಲ್ಲಿ ಜನಪದರು ಸೃಷ್ಟಿಯ ನಡುವೆ ಜೀವಿಸುವ ಮಾನವ ಸೃಷ್ಟಿಯ ಅನಂತತೆಯೊಂದಿಗೆ ತನ್ನ ಬಾಳ ಬದುಕನ್ನು ಅನನ್ಯಗೊಳಿಸಿಕೊಳ್ಳುವ ಸಂದರ್ಭದಲ್ಲಿ ಅನೇಕ ಭಯ–ಭೀತಿಗಳಿಗೆ ಒಳಗಾಗುತ್ತಾನೆ. ಬೃಹತ್ ಅರಣ್ಯಗಳ ನಡುವೆ ಬದುಕು ಕಟ್ಟಿಕೊಳ್ಳಲು ಪ್ರಾರಂಭಿಸಿದ ಮಾನವನಿಗೆ ಅನೇಕ ಆತಂಕದ ಸನ್ನಿವೇಶಗಳು ನಿರ್ಮಾಣವಾಗುತ್ತವೆ. ಪ್ರಕೃತಿಯೊಂದಿಗೆ ಹೇಗೆ ತನ್ನ ಬದುಕನ್ನು ಕಟ್ಟಿಕೊಳ್ಳಬೇಕು? ನನ್ನ ಇತಿ ಮಿತಿಗಳೇನು? ಪ್ರಕೃತಿಯಲ್ಲಿ ಸಹಜವಾಗಿ ಬಂದೊದಗುವ ಆತಂಕ, ಅಪಾಯಗಳಿಂದ ಮುಕ್ತನಾಗಲು ಹೇಗೆ ಬದುಕಬೇಕೆಂದುದನ್ನು ಗ್ರಹಿಸ ತೊಡಗಿದನು. ಪ್ರಕೃತಿಯೊಂದಿಗಿನ ಅವಿನಾಭಾವ ಸಂಬಂಧ ಬೆಸೆಯುವುದಕ್ಕಾಗಿಯೇ ಸಾಕಷ್ಟು ಆಚರಣೆಗಳು ಆರಂಭವಾದವು. ಜನಪದರ ಈ ಅನುಭವ ಜನ್ಯ ಆಚರಣೆಗಳೇ ಕಾಲಾಂತರದಲ್ಲಿ ಪಾರಂಪರಿಕ ಜ್ಞಾನಗಳಾಗಿ ನಮ್ಮ ಅನನ್ಯತೆಗಳನ್ನು ವಿಸ್ತಾರಗೊಳಿಸಿವೆ: ವಿಸ್ತಾರಗೊಳಿಸುತ್ತವೆ.

ಜಾಗತಿಕ ಸಂದರ್ಭದಲ್ಲಿ ಊರು–ಪಶುಪಾಲನೆ–ಕೃಷಿಗೆ ಸಂಬಂಧಿಸಿದ ವೈವಿದ್ಯಮಯ ಜೈವಿಕ ಜ್ಞಾನ ಪರಂಪರೆಯನ್ನು ಇಂದು ಉಳಿಸುವ ಅವಶ್ಯಕತೆ ಇದೆ. ಜನಪದರ ನೆಲಮೂಲ ಜ್ಞಾನವು ಏಕಮುಖವಾಗಿರದೆ ಬಹುಮುಖದ್ದಾಗಿರುತ್ತದೆ. ಇದು ಅನುಭವ ಜನ್ಯದಿಂದ ಬಂದಂಥಹ ಜ್ಞಾನವಾಗಿದೆ. ಇದರ ದೇಶೀ ಪದ್ಧತಿ ಎಂಬುದು ಭಾರತದಾದ್ಯಂತ ಆಯಾ ಪರಿಸರಕ್ಕನುಗುಣವಾಗಿ, ವಿಭಿನ್ನ ಅನುಭವ ಜ್ಞಾನವನ್ನು ಹೊಂದಿದ್ದಾರೆ. ಜನರ ಜೀವನರಕ್ಷಣೆ ವಿಧಾನ, ತಮ್ಮ ಸುತ್ತಲಿನ ಪರಿಸರ, ಜಾನುವಾರುಗಳ ರಕ್ಷಣೆ, ಪೋಷಣೆ ಇತ್ಯಾದಿಗಳೆಲ್ಲವನ್ನು ತಮ್ಮ ಜ್ಞಾನದ, ಅನುಭವದ ಹಿನ್ನೆಲೆಯಲ್ಲಿ ಸಂರಕ್ಷಿಸಿಗೊಂಡು ಬರುತ್ತಿದ್ದಾರೆ. ಹಾಗಾಗಿ ಅವರ ಈ ಜೀವನ ಕ್ರಮದಲ್ಲಿ ಅನೇಕ ಬಗೆಯ ನಂಬಿಕೆ ಆಚರಣೆ, ಸಂಪ್ರದಾಯಗಳನ್ನು ಅನುಸರಿಸುತ್ತಾ ಬಂದಿರುವುದು ಕಂಡುಬರುತ್ತದೆ. ಜನಪದರ ಆಚರಿಸುವ ಆಚರಣೆ, ಸಂಪ್ರದಾಯ,ನಂಬಿಕೆ ಇವೆಲ್ಲವೂ ಜೀವನ ವರ್ತನ ಕ್ರಿಯೆಗಳಾಗಿ ನಡೆಯುವುದಿಲ್ಲ.ಇವುಗಳ ಆಚರಣೆಯ ಹಿಂದೆ ಅವರದ್ದೇ ಆದ ಜೈವಿಕ, ವೈದ್ಯಕೀಯ, ರಕ್ಷಣೆಯ ತಂತ್ರಕಾರಿಕೆ, ಆಪತ್ತುಗಳಿಂದ ಪಾರಾಗುವ ಉಪಾಯಗಳು: ಇವೆಲ್ಲವು ಜನಪದರ ದೇಶಿ ಜ್ಞಾನದಿಂಧ ಹುಟ್ಟಿಕೊಂಡವುಗಳಾಗಿವೆ.ಮುಖ್ಯವಾಗಿ ಜನಪದರು ಆಚರಿಸುವ ಆಚರಣೆಗಳು ಪ್ರದೇಶದಿಂಧ ಪ್ರದೇಶಕ್ಕೆ ಭಿನ್ನ ರೂಪಗಳನ್ನು ಪಡೆದುಕೊಂಡಿದ್ದರೂ ಅವುಗಳ ಒಟ್ಟು ಆಶಯಮಾತ್ರ ಒಂದೇ ಆಗಿರುತ್ತದೆ. ಇಂತಹ ಆಚರಣೆಗಳನ್ನು ಆಚರಿಸುವ ಜನಪದರು ಅತ್ಯಂತ ಕಟ್ಟುನಿಟ್ಟಿನಿಂಧ ಶ್ರದ್ಧೆಯಿಂದ ಆಚರಿಸಲಾಗುತ್ತದೆ.ಈ ಆಚರಣೆಗಳು ಆಯಾ ಪ್ರದೇಶದ ಜನರ ಸಂಸ್ಕೃತಿಯ ಜೈವಿಕ ವಿಶಿಷ್ಟತೆಯನ್ನು ತಿಳಿಸುತ್ತವೆ.

ಇಂತಹ ಸಾಂಸ್ಕೃತಿಕ, ಜೈವಿಕ ವೈಶಿಷ್ಟ್ಯತೆಗಳನ್ನು ಇಟ್ಟುಕೊಂಡು ಆಚರಣೆಗೊಳ್ಳುವ ಜನಪದರ ಹಲವಾರು ಆಚರಣೆಗಳಲ್ಲಿ ಮುಸುರೆ ಚೆಲ್ಲುವುದು ಮತ್ತು ತೀರ್ಥಚೆಲ್ಲುವುದು ಈ ಎರಡು ಆಚರಣೆಗಳನ್ನು ಇಟ್ಟುಕೊಂಡು ನನ್ನ ಪ್ರಬಂಧವನ್ನು ವಿಶ್ಲೇಷಿಸುವ ಪ್ರಯತ್ನ ನನ್ನದಾಗಿದೆ

## ಮುಸುರೆ ಚೆಲ್ಲುವ ಆಚರಣೆ:

ಮಧ್ಯ ಕರ್ನಾಟಕದಲ್ಲಿ ಪ್ರಚಲಿತವಿರುವ ವಿಶಿಷ್ಟ ಆಚರಣೆಯೇ 'ಮುಸುರೆ ಚೆಲ್ಲುವು'ದು. ಊರು, ಜನ-ಜಾನುವಾರುಗಳ ಮತ್ತು ಕೃಷಿ ಬೆಳೆಗಳ ಸಮೃದ್ಧಿ ಹಾಗೂ ರಕ್ಷಣೆಗಾಗಿ ಈ ಆಚರಣೆಯನ್ನು ಆಚರಿಸುತ್ತಿರುವುದು ಕಂಡುಬರುತ್ತದೆ. ಈ ಆಚರಣೆಯ ವಿವರಣೆ ಮತ್ತು ವಿಶ್ಲೇಷಣೆಗೆ ತೊಡಗುವ ಮುನ್ನ 'ಮುಸುರೆ' ಎಂಬ ಪದದ ಅರ್ಥ ಮತ್ತು ಸ್ವರೂಪವನ್ನು ತಿಳಿದುಕೊಳ್ಳುವುದು ಅಗತ್ಯ. ಕನ್ನಡ ಸಾಹಿತ್ಯ ಪರಿಷತ್ತಿನ, ಸಂಕ್ಷಿಪ್ತ ಕನ್ನಡ ನಿಘಂಟುವಿನಲ್ಲಿ 'ಮುಸ(ಸು)ರೆ' ಎಂಬ ಪದಕ್ಕೆ; ಪಾತ್ರೆಯಲ್ಲಿ ಬೇಯಿಸಿದ ಆಹಾರ ಪದಾರ್ಥಗಳನ್ನು ತೊಳೆಯದೆ ಇರುವುದರಿಂದ ಉಂಟಾಗುವ ಅಶುಚಿ, ಕೊಳೆ, ದನಕರುಗಳಿಗೆ ನೀಡುವ ಕಲಗಚ್ಚು, ತೊಳೆಯಬೇಕಾಗಿರುವ ಪಾತ್ರೆ; ಎಂಜಲು ಪಾತ್ರೆ ಎಂಬ ಅರ್ಥಗಳನ್ನು ನೀಡಲಾಗಿದೆ (ಕನ್ನಡ ಸಾಹಿತ್ಯ ಪರಿಷತ್ತು ಸಂಕ್ಷಿಪ್ತ ಕನ್ನಡ ನಿಘಂಟು, ಪುಟ:1035) ಈ ಆಚರಣೆಯ ಮುಖ್ಯ ಉದ್ದೇಶ ದನ-ಕರು ಹಾಗೂ ಕೃಷಿ ಬೆಳೆಗಳಿಗೆ ಯಾವುದೇ ರೀತಿ ರೋಗ-ರುಜಿನಗಳು ಹಾಗೂ ದೃಷ್ಟಿ ತಾಗದಿರಲೆಂಬ ಆಶಯವನ್ನು ಹೊಂದಿದೆ. ಈ ಆಚರಣೆಯ ಸಂದರ್ಭದಲ್ಲಿ 'ಮುಸರೆ' ಯು ಬೇರೆಯದ್ದೇ ಸ್ಥಾನವನ್ನು ಪಡೆದುಕೊಂಡಿದೆ ಎಂದು ಹೇಳಬಹುದು. ಅಡುಗೆ ಮಾಡಿದ ಅನ್ನವನ್ನು ಯಾರೂ ಬಳಸದ ಮುನ್ನ ದೇವರ ಎಡೆಗೆಂದು ತೆಗೆದಿಟ್ಟು, ದೇವರಿಗೆ ಎಡೆ ಮಾಡಿದ ನಂತರ ಆ ಎಡೆಯಲ್ಲಿನ ಸ್ವಲ್ಪ ಭಾಗವನ್ನು ನೀರಿನಲ್ಲಿ ಕಲೆಸಿ ದನ-ಕರು, ಕುರಿ-ಮೇಕೆ, ಸಮೃದ್ಧಿಯಾಗಿ ಬೆಳೆದು ನಿಂತ ಹೊಲಗಳಿಗೆ ಚೆಲ್ಲುವ ಸಂಪ್ರದಾಯ ಇರುವುದು ಕಂಡುಬರುತ್ತದೆ. ಹೀಗೆ ಮುಸರೆ ಚೆಲ್ಲುವುದರಿಂದ ಅನ್ನ ತಿನ್ನಲು ಬರುವ ಪಕ್ಷಿಗಳು ಜಾನುವಾರುಗಳ, ಕುರಿ-ಮೇಕೆಗಳ ಮೈಮೇಲಿನ ಹುಣ್ಣೆಗಳನ್ನು ತಿನ್ನುತ್ತವೆ. ಹಾಗೆಯೇ ಹೊಲಕ್ಕೆ ಚೆಲ್ಲಿದಾಗ ಹೊಲಗಳಿಗೆ ಬಂದ ಪಕ್ಷಿಗಳು ಅನ್ನ ತಿನ್ನುವ ನೆಪದಲ್ಲಿ ಹೊಲಕ್ಕೆ ಬಿದ್ದ ಕ್ರಿಮಿ ಕೀಟಗಳನ್ನು ತಿನ್ನುತ್ತವೆ, ಇದರಿಂದ ಬೆಳೆಗಳು ಹಾನಿಯಾಗುವುದು ತಪ್ಪುತ್ತದೆ ಎಂಬ ಉದ್ದೇಶವೂ ಈ ಆಚರಣೆಯ ಇನ್ನೊಂದು ಆಯಾಮ ಪಡೆದುಕೊಂಡಿರುವ ಸಾಧ್ಯತೆ ಇದೆ. ಹೀಗೆ ಜನಪದರು ತಾವು ಆಚರಿಸುವ ಆಚರಣೆಗಳು ಬರೀ ತೋರಿಕೆಗಾಗಿ ಮೌಢ್ಯದಿಂದ ಕೂಡಿದವು ಎಂದು ಸಾರಾಸಗಟಾಗಿ ತಿರಸ್ಕರಿಸುವಂತಿಲ್ಲ. ಇಂತಹ ಆಚರಣೆಗಳ ಹಿಂದೆ ತಮಗೊದಗಿದ, ಒದಗುವ ಅಪಾಯಗಳನ್ನು ತಪ್ಪಿಸಿಕೊಳ್ಳುವ ಬಹು ಮುಖ್ಯ ಅಂಶಗಳನ್ನು ಒಳಗೊಂಡಿರುತ್ತದೆ ಎಂಬುದನ್ನು ಅಲ್ಲಗಳೆಯುವಂತಿಲ್ಲ.

ಕರ್ನಾಟಕದ ಕೃಷಿ ಸಮುದಾಯಗಳು ಆಚರಿಸುವ ಆಚರಣೆಗಳಲ್ಲಿ 'ಮುಸುರೆ' ಚೆಲ್ಲುವುದು ಒಂದು ವಿಶಿಷ್ಟ ಆಚರಣೆಯಾಗಿದೆ. ವಿಶೇಷವಾಗಿ ಈ ಆಚರಣೆಯು ಮಂಗಳವಾರ, ಶುಕ್ರವಾರ, ಅಮವಾಸ್ಯೆ ಮತ್ತು ಹುಣ್ಣಿಮೆಯ ದಿನಗಳಂದು ನಡೆಯುತ್ತದೆ. ಇದರಲ್ಲಿ ಊರಿನ ಗೊಂಚಿಕಾರ, ಗೌಡ, ಪಟೇಲರು, ಹಟ್ಟಿಯ ಯಜಮಾನರು ಈ ಕಾರ್ಯದಲ್ಲಿ ತೊಡಗುತ್ತಾರೆ. ಮುಸರೆ ಚೆಲ್ಲುವ ಕಾರ್ಯಕ್ಕೆ ಬಳಸುವ ಮಣ್ಣಿನ ಪಾತ್ರೆಯನ್ನು ಗೌಡರ ಮನೆಯಲ್ಲಿ ಇಟ್ಟಿರುತ್ತಾರೆ. ಇದನ್ನು ಮುಸರೆ ಚೆಲ್ಲುವ ಸಮಯದಲ್ಲಿ ಊರಿನ ಗೌಡರ ಮನೆಯಿಂದ ತಂದು, ಗ್ರಾಮದ ಪ್ರತಿಯೊಂದು ಮನೆಯಿಂದ ಅನ್ನ, ಮುದ್ದೆ, ರಾಗಿಹಿಟ್ಟು, ಜೋಳದ ಹಿಟ್ಟು ಸಂಗ್ರಹಿಸಿಕೊಂಡು, ಊರಿನ ಮಧ್ಯಭಾಗದಲ್ಲಿರುವ ಮಾರಿ ದೇವಸ್ಥಾನದಲ್ಲಿ ಇಡುತ್ತಾರೆ. ಹೀಗೆ ಸಂಗ್ರಹಸಿದ ಪದಾರ್ಥಗಳಿಗೆ ಕುಂಕುಮ, ವಿಭೂತಿ, ಊದಿನ ಕಡ್ಡಿಯಿಂದ ಪೂಜೆ ಮಾಡಿ, ಕಾಯಿ ಒಡೆಯುತ್ತಾರೆ. ಹೀಗೆ ಪ್ರತಿ ಮನೆಯಿಂದ ತಂದ ಮುಸರೆ ಪದಾರ್ಥವನ್ನು ಎಡೆ ಮಾಡಿ ಅರ್ಪಿಸುತ್ತಾರೆ. ಎಡೆ ಅರ್ಪಿಸಿದ ಪದಾರ್ಥ, ಕುಂಕುಮವನ್ನು ಮತ್ತು ಬೇವಿನ ಎಲೆ ಇವುಗಳನ್ನು ಮಣ್ಣಿನ ಪಾತ್ರೆಯಲ್ಲಿ ಕಲೆಸಿ ಸಿದ್ಧಪಡಿಸಿಕೊಳ್ಳುತ್ತಾರೆ. ಈ ಕ್ರಿಯೆಯಲ್ಲಿ ಮುಖ್ಯವಾಗಿ ಮೂರು ಜನ ಭಾಗವಹಿಸುತ್ತಾರೆ. ಒಬ್ಬ ಮುಂದೆ ಮುಸರೆ ಚೆಲ್ಲುವ ಸಂದರ್ಭದಲ್ಲಿ ಚಿಕ್ಕ ಮಕ್ಕಳು, ಗರ್ಭಿಣಿಯರು ಹೊರಗೆ ಬರಬೇಡಿ ಎಂದು ಸಾರುತ್ತಾ ಹೋಗುತ್ತಿದ್ದರೆ, ಅವನ ಹಿಂದೆ ಮತ್ತೊಬ್ಬ ನೀರನ್ನು ಚಿಮುಕಿಸಿಕೊಂಡು ಸಾಗುತ್ತಾನೆ. ಅವನ ಹಿಂದೆ ಮಗದೊಬ್ಬ ಕಂಬಳಿಯನ್ನು ಒದ್ದುಕೊಂಡು ಮಣ್ಣಿನ ಮುಸರೆ ಪಾತ್ರೆಯನ್ನು ಹಿಡಿದುಕೊಂಡು, ಬೇವಿನ ಸೊಪ್ಪನ್ನು ಪಾತ್ರೆಯಲ್ಲಿ ಅದ್ದಿ ತೆಗೆದು ಮುಸರೆ ಚೆಲ್ಲುತ್ತಾನೆ. ಹೀಗೆ ಚೆಲ್ಲುವಾಗ ಎಡದಿಂದ ಬಲಕ್ಕೆ ತಿರುಗುತ್ತಾ ಊರ ಹೊರಗಡೆ ಸಾಗುತ್ತಾರೆ. ಮುಸರೆ ಚೆಲ್ಲುವ ಉದ್ದೇಶವನ್ನು ಗಮನಿಸಿದಾಗ ಜನ-ದನ-ಕುರಿಗಳಿಗೆ ಯಾವುದೇ ರೋಗ ಬಾರದಿರಲಿ ಎಂಬ ಉದ್ದೇಶವಾಗಿರುತ್ತದೆ.

ಕೃಷಿ ಕುಟುಂಬಗಳು ದಿನಾಲು ಸಾಯಂಕಾಲ ಅಡುಗೆ ಮಾಡಿದ ನಂತರ ಮನೆಯ ಒಳಗೆ-ಹೊರಗೆ ಮುಸರೆ ಚೆಲ್ಲುವುದರ ಜೊತೆಗೆ ತಾವು ಸಾಕಿದ ಜಾನುವಾರುಗಳಿಗೂ ಪ್ರತಿದಿನ ಮುಸರೆ ಚೆಲ್ಲುವ ಪದ್ಧತಿ ರೂಢಿಯಲ್ಲಿದೆ. ಇಲ್ಲಿ ರಾವು(ಬೇರೆಯವರ ದೃಷ್ಟಿ ತಾಗದಿರಲಿ)ನಿವಾರಣೆಯಾಗಲಿ ಎಂಬ ಆಶಯವೂ ಇದೆ.

ಮಳೆಗಾಲದ ಸಂದರ್ಭದಲ್ಲಿ ಸಿಡಿಲು-ಗುಡುಗುಗಳು ಆರ್ಭಟಿಸಿದಾಗ, ಮನೆಗಳಿಗೆ ಬೆಂಕಿ ಬಿದ್ದಾಗ ಮುಸರೆ ಚೆಲ್ಲುತ್ತಾರೆ. ಈ ಮುಸರೆ ಚೆಲ್ಲುವುದರ ಮುಖ್ಯ ಉದ್ದೇಶವೇನು ಎಂದು ಪ್ರಶ್ನಿಸಿದಾಗ 'ಶಾಂತಿಗಾಗಿ' ಎಂಬ ಮಾಹಿತಿಯನ್ನು ವಕ್ತೃಗಳು ವ್ಯಕ್ತಪಡಿಸುತ್ತಾರೆ.

**ತೀರ್ಥ ಚೆಲ್ಲುವ ಆಚರಣೆ:**

ನೀರಿಗೆ ಔಷಧಿಯ ಗುಣವಿದೆ ಎನ್ನುವುದನ್ನು ಅನಾದಿಕಾಲದಿಂದಲೂ ಮಾನವ ತಿಳಿದಿದ್ದ. ಶುದ್ಧ ನೀರನ್ನು ಕುಡಿಯುವುದರಿಂದ ನೂರಾರು ಖಾಯಿಲೆಗಳನ್ನು ತಡೆಗಟ್ಟಬಹುದೆಂದು ಭಾರತೀಯ ಯೋಗವಿಜ್ಞಾನ ತಿಳಿಸುತ್ತದೆ. ಮಾಟ, ಮಂತ್ರ, ತಂತ್ರಾಚರಣೆಗಳಲ್ಲಿ ಬಳಸುವ ಜಲಕ್ಕೆ ಕ್ಷುದ್ರ ಶಕ್ತಿಯನ್ನು ಬಿಡಿಸುವ ಮತ್ತು ರೋಗ ಗುಣಪಡಿಸುವ ಶಕ್ತಿಯಿದೆ ಎಂಬ ನಂಬುಗೆ ನಮ್ಮಲ್ಲಿದೆ. ನೀರಿಗೆ ಮನುಷ್ಯನ ಹೊರ ಹಾಗೂ ಒಳ ಭಾಗಗಳನ್ನು ಶುಚಿಗೊಳಿಸುವ ಮತ್ತು ಆರೋಗ್ಯವನ್ನು ನೀಡುವ ಗುಣವಿದೆ. ಸ್ತ್ರೀಯ ಬಂಜೆತನವನ್ನು ಹೋಗಲಾಡಿಸಿ, ಫಲವನ್ನು ನೀಡುವ ಶಕ್ತಿಯುಂಟೆಂದು ನಂಬಲಾಗುತ್ತದೆ. ಬಂಜೆಯಾದವಳು ನೀರಿನಲ್ಲಿ ಮುಳುಗಿ ಏಳುವುದರಿಂದ ಫಲವತಿಯಾಗುತ್ತಾಳೆ ಎಂಬ ನಂಬಿಕೆ ಪ್ರಪಂಚದಾದ್ಯಂತ ಕಂಡುಬರುತ್ತದೆ. ಪ್ರಾಚೀನ ಗ್ರೀಕ್‌ನಲ್ಲಿ ಮದುವೆಗೆ ಮುನ್ನ ಸ್ತ್ರೀಯರು ನದಿಯಲ್ಲಿ ಮುಳುಗಿ ಏಳುವ ಆಚರಣೆಯಿಂದ ತಮ್ಮ ಕನ್ಯತ್ವವನ್ನು ಜಲದೇವತೆಗೆ ಅರ್ಪಿಸಿ, ಮಕ್ಕಳನ್ನು ಕರುಣಿಸುವಂತೆ ಪ್ರಾರ್ಥಿಸುತ್ತಿದ್ದರು.

ಶಿಷ್ಟ ಹಾಗೂ ಜನಪದ ಆಚರಣೆ, ಶಾಸ್ತ್ರ, ವಿಧಿ ಮತ್ತು ಪೂಜೆಗಳು ನೀರಿಲ್ಲದೆ ನಡೆಯಲಾರದು. ಹುಟ್ಟು, ಮದುವೆ ಸಾವಿನಂತಹ ಜೀವನಾವರ್ತನದ ಹಾಗೂ ಹಬ್ಬ, ಜಾತ್ರೆ, ಉತ್ಸವಗಳಂಥ ವಾರ್ಷಿಕಾವರ್ತನದ ಆಚರಣೆಗಳಲ್ಲಿ ನೀರು ಪ್ರಮುಖ ಪಾತ್ರ ವಹಿಸುತ್ತದೆ. ಜಾತ್ರೆ ಅಥವಾ ಉತ್ಸವ ನಡೆಯುವ ಆಚರಣೆಯ ಮುನ್ನಾದಿನ ದೇವರ ವಿಗ್ರಹವನ್ನು ಮೆರವಣಿಗೆಯಲ್ಲಿ ಒಯ್ದು, ನದಿ, ಬಾವಿ, ಕೆರೆ, ಹಳ್ಳಗಳ ನೀರಿನಲ್ಲಿ ಶುದ್ಧೀಕರಿಸಿ ಪೂಜೆ ಸಲ್ಲಿಸುತ್ತಾರೆ. ಹೊಸ ಗಡಿಗೆ ಅಥವಾ ಕಂಚು, ಹಿತ್ತಾಳೆ ಕೊಡದಲ್ಲಿ ನೀರನ್ನು ತುಂಬಿಸಿಕೊಂಡು ತಂದು ಕಳಸ ಪ್ರತಿಷ್ಠಾಪನೆ ಮಾಡುತ್ತಾರೆ. ಕರ್ನಾಟಕದಾದ್ಯಂತ ಜಾತ್ರೆ ಅಥವಾ ತೆಪ್ಪಗಳ ಮೇಲೆ ಆಚರಣೆ ಕಂಡುಬರುತ್ತದೆ. ಇದನ್ನು ತೆಪ್ಪೋತ್ಸವ ಎನ್ನುತ್ತಾರೆ. ಒಂದು ರೀತಿಯಲ್ಲಿ ಇದು ದೇವರ ಜಲ ಕ್ರೀಡೆ ಎಂದು ಜನರ ನಂಬುಗೆ. ಕರ್ನಾಟಕದ ಹಲುವು ಭಾಗಗಳಲ್ಲಿ ಜನ ವಸಂತೋತ್ಸವ ಅಥವಾ ಓಕುಳಿ ಆಡುವ ಪದ್ಧತಿ ರೂಢಿಯಲ್ಲಿದೆ. ಹರಿಶಿಣದ ನೀರನ್ನು ಪರಸ್ಪರ ಎರಚಿಕೊಳ್ಳುವುದೇ ಈ ಆಚರಣೆಯ ವಿಶೇಷ. ಉತ್ತರ ಕರ್ನಾಟಕದ ಭಾಗಗಳಲ್ಲಿ ಬಸವಿ ಬಿಟ್ಟ ಹುಡುಗಿಯರ ಮೇಲೆ ಓಕುಳಿ ಚೆಲ್ಲುವ ಆಟ ನಡೆದರೆ, ದಕ್ಷಿಣ ಕರ್ನಾಟಕದ ಭಾಗದಲ್ಲಿ ಎರಡು ಊರಿನ ಜನರ ಮಧ್ಯೆ ನಡೆಯುತ್ತದೆ. ಕೋಲಾರದ ಕಡೆಗೆ ವೀರಕುಮಾರರು ಎರಡು ಗುಂಪಾಗಿ ಓಕುಳಿ ನೀರಿನಿಂದ ಎರಚಾಡುವುದು ಕಂಡುಬರುತ್ತದೆ.

ಮಧ್ಯೆ ಕರ್ನಾಟಕದ ಜನಸಮುದಾಯಗಳಲ್ಲಿ ತೀರ್ಥ ಚೆಲ್ಲುವ ವಿಶಿಷ್ಟ ಆಚರಣೆಗಳಿವೆ. ಅವುಗಳಲ್ಲಿ ಗಮನಿಸಬೇಕಾದ ಆಚರಣೆಯೆಂದರೆ ರೈತರು, ಪಶುಪಾಲಕರು ತಮ್ಮ ಮನೆ ದೈವ ಅಥವಾ ಇಷ್ಟ ದೈವದ ಸನ್ನಿಧಿಗೆ ಹೋಗಿ ಅಲ್ಲಿ ಪೂಜೆಮಾಡಿಸಿ ಬರುವಾಗ ದೇವರ ಮುಂದೆ ಒಡೆಯಾದ ತೆಂಗಿನ ಕಾಯಿಯ ನೀರು, ಪತ್ರೆ, ಹೂ ಮಿಶ್ರಿತ ತೀರ್ಥವನ್ನು ತಂದು ತಮ್ಮ ಹೊಲ, ಮನೆ ಮತ್ತು ದೊಡ್ಡಿಗಳಿಗೆ ಚೆಲ್ಲುವ ಪರಿಪಾಟವಿದೆ. ಇನ್ನೂ ಕೆಲವು ಕಡೆ ಪೂಜೆಯ ಸಂದರ್ಭದಲ್ಲಿ ಒಂದು ತೆಂಗಿನ ಕಾಯಿಯನ್ನು ಒಡೆಯದೆ ಹಾಗೆ ಇಡಿಗಾಯನ್ನು ದೇವರಿಗೆ ಅರ್ಪಿಸಿ ಅದನ್ನು ಮತ್ತೆ ಮರಳಿ ಪಡೆದು ತರುತ್ತಾರೆ. ಇದನ್ನು 'ತೀರ್ಥದ ಕಾಯಿ' ಎಂದು ಕರೆಯುತ್ತಾರೆ. ಆ ತೀರ್ಥದ ಕಾಯಿಯನ್ನು ಊರು, ಹೊಲ ಅಥವಾ ದೊಡ್ಡಿಯ ಬಳಿ ಪೂಜೆ ಸಲ್ಲಿಸಿ ಆ ತೀರ್ಥದ ಕಾಯನ್ನು ಒಡೆದು ಅದರ ನೀರನ್ನು ತೀರ್ಥವೆಂದು ಚೆಲ್ಲುವ ಕ್ರಮವೂ ಇದೆ. ಇದರಿಂದ ಜನ ಜಾನುವಾರುಗಳಿಗೆ ಶುಭವಾಗುತ್ತದೆ. ಯಾವುದೇ ರೋಗ ರುಜಿನಿಗಳು ಬರುವುದಿಲ್ಲ. ಹಾಗೆಯೇ ಭೂಮಿಯ ಬೆಳೆಗಳಿಗೆ ಕೀಟ ಬಾಧೆ ಇರುವುದಿಲ್ಲ. ಬೆಳೆಯು ಸಂವೃದ್ಧಿಯಾಗುತ್ತದೆ ಎಂಬುದು ಬಲವಾದ ನಂಬಿಕೆಯಾಗಿದೆ.

ಕೃಷಿಗೆ ನೀರೇ ಮೂಲಾಧಾರ. ಕೃಷಿ ಚಟುವಟಿಕೆಗಳ ಪ್ರತಿ ಹಂತದಲ್ಲಿಯೂ ಹತ್ತಾರು ಆಚರಣೆಗಳು ಜರುಗುತ್ತವೆ. ಈ ಎಲ್ಲಾ ಆಚರಣೆಗಳ ಕೇಂದ್ರ ಆಶಯ ಫಲವಂತಿಕೆಯಾಗಿದೆ. ಹೊನ್ನಾರು, ಬಿತ್ತನೆ, ರಾಶಿಪೂಜೆ ಇತ್ಯಾದಿಗಳಲ್ಲಿ ಬಲಿ ನೀಡುವ ಪದ್ಧತಿ ರೂಢಿಯಲ್ಲಿದೆ. ಚರಗ ಚೆಲ್ಲುವುದರಿಂದ(ರಕ್ತ ಮಿಶ್ರಿತ ಅನ್ನ) ಫಸಲು ಸಮೃದ್ಧಿಯಾಗುತ್ತದೆಂಬ ನಂಬಿಕೆ ಕರ್ನಾಟಕದಾದ್ಯಂತ ಕಂಡುಬರುತ್ತದೆ. ಚರಗ ಚೆಲ್ಲುವ ಪೂರ್ವದ ಎಲ್ಲಾ ಆಚರಣೆಗಳಲ್ಲಿಯೂ ಮೊದಲು ನೀರನ್ನು ತೀರ್ಥವಾಗಿ ಚಲ್ಲತ್ತಾರೆ. ಉದಾಹರಣೆಗೆ ಮಲೆನಾಡಿನಲ್ಲಿ ನಡೆಯುವ ಕಟ್ಟಜ್ಜಿ ಆಚರಣೆಯನ್ನು ನೋಡುವುದಾದರೆ, ಊರಿನ ಜನರೆಲ್ಲ ಹಂದಿಯೊಂದನ್ನು ಕಾಲು ಕಟ್ಟಿ ಹೊತ್ತು, ಊರಿನ ಗದ್ದೆಯ ಬಯಲನ್ನು ಸುತ್ತುತ್ತಾರೆ. ಅನಂತರ ನಿಗದಿತ ಸ್ಥಳವೊಂದರಲ್ಲಿ ಹಂದಿಯನ್ನು ಬಲಿ ಕೊಟ್ಟು, ರಕ್ತವನ್ನು ಅನ್ನದ ಜೊತೆಗೆ ಸೇರಿಸಿ ಎಲ್ಲರೂ ಹಂಚಿಕೊಳ್ಳುತ್ತಾರೆ. ಹೀಗೆ ಹಂಚಿಕೊಂಡ ರಕ್ತದ ಅನ್ನವನ್ನು ತಮ್ಮ ತಮ್ಮ ಗದ್ದೆಗಳಲ್ಲಿ ಚೆಲ್ಲುತ್ತಾರೆ. ನೀರಿಗೆ ಸಂವಾದಿಯಾಗಿ ರಕ್ತ, ತೀರ್ಥ ಚೆಲ್ಲುವುದರಿಂದ ಸಮೃದ್ಧಿ ಉಂಟಾಗುತ್ತದೆ ಎಂಬುದು ಜನಪದರ ತಿಳುವಳಿಕೆಯಾಗಿದೆ. ಜಾತಿಯಿಂದ ಬಹಿಷ್ಕೃತಗೊಂಡ ವ್ಯಕ್ತಿಗಳನ್ನು ಸಮೂಹದಿಂದ ದೂರವಿಟ್ಟಾಗ ಬೆಂಕಿ ಮತ್ತು ನೀರನ್ನು ಕೊಡುವುದಿಲ್ಲ. ಹಾಗೆಯೇ ಜಾತಿಗೆ ಸೇರಿಸಿಕೊಳ್ಳುವಾಗಲೂ ತಪ್ಪಿತಸ್ಥ ವ್ಯಕ್ತಿ ನೀರನ್ನು ಸಾಕ್ಷಿಯಾಗಿಟ್ಟು ತಪ್ಪೊಪ್ಪಿಗೆ ನೀಡಿ ಸಮುದಾಯದ ಕ್ಷಮೆ ಯಾಚಿಸಬೇಕಾಗುತ್ತದೆ.

ಜಾತಿಯ ಅಶುದ್ಧತೆಯನ್ನು ನೀರು ಕಳೆಯುತ್ತದೆ ಎಂಬುದು ಮೇಲಿನ ಆಚರಣೆಗೆ ಸಾಕ್ಷಿ ಒದಗಿಸುತ್ತದೆ. ತುಂಬಿದ ಕೊಡ, ತುಂಬು ಜೀವನದ ಸಂಕೇತವಾಗಿದೆ. ಮದುವೆ ದಿನ ಗಂಡು–ಹೆಣ್ಣುಗಳೆರಡರ ಮನೆಗಳಲ್ಲಿಯೂ ಗೌರಿ ಪೂಜೆ ನಡೆಸುವ ಆಚರಣೆ ರೂಢಿಯಲ್ಲಿದೆ. ಮದುವೆಯ ಆನಂತರ ಗಂಡು–ಹೆಣ್ಣುಗಳನ್ನು ಬೆಸೆಯುವ ಮಾಧ್ಯಮವಾಗಿ ಗಂಗಾ ಪೂಜಾಕಾರ್ಯ ಅಸ್ತಿತ್ವದಲ್ಲಿದೆ. ಗಂಡು–ಹೆಣ್ಣುಗಳು ನೀರಿರುವ ಬಾವಿ(ಕೆರೆ,ಹಳ್ಳ)ಯ ಅಕ್ಕಪಕ್ಕದಲ್ಲಿ ಬಿತ್ತಿದ ಬೀಜಗಳು ಫಲವಂತಿಕೆಯ ಸಂಕೇತವಾಗಿವೆ. ಹೆಣ್ಣು ಬಿತ್ತಿ ನೀರೆರೆದ ಬೀಜವು ಚೆನ್ನಾಗಿ ಬೆಳೆದರೆ ಹುಟ್ಟುವ ಮಗು ಹೆಣ್ಣೆಂದು, ಗಂಡು ಬಿತ್ತಿ ನೀರೆರೆದ ಬೀಜವು ಚೆನ್ನಾಗಿ ಬೆಳೆದರೆ ಹುಟ್ಟುವ ಮಗುವು ಗಂಡೆಂದು ಭಾವಿಸುತ್ತಾರೆ. ಭಾವಿಯಿಂದ ಹೆಣ್ಣುಮಗಳು ಹೊತ್ತುತರುವ ನೀರಿನ ಕಳಸ ದೇವರ ಸಂಕೇತವೆಂದೇ ನಂಬುತ್ತಾರೆ. ತಂದೆಯ ಮನೆಯಿಂದ ಗಂಡನಮನೆಗೆ ಇಲ್ಲವೆ ಗಂಡನಮನೆಯಿಂದ ತಂದೆಯಮನೆಗೆ ಹೋಗಿ ಬರುವಾಗ ದಾರಿಯಲ್ಲಿ ನದಿ, ಹಳ್ಳ, ತೊರೆ, ಕೆರೆಯನ್ನು ಕಂಡರೆ ಅದನ್ನು ದಾಟಿದ ನಂತರ ಎಲೆ–ಅಡಿಕೆಯನ್ನು ನೀವಾಳಿಸಿ ಬಿಟ್ಟು ಬರುವ ಪದ್ಧತಿಯಿದೆ. ಕೃಷಿಯ ಪ್ರತಿ ಕಾರ್ಯದಲ್ಲಿಯೂ ಗಂಗೆಯನ್ನು ಪೂಜಿಸುವ ಪರಿಪಾಠ ನಮ್ಮಲ್ಲಿ ಇಂದಿಗೂ ನಡೆದುಕೊಂಡು ಬರುತ್ತಿದೆ. ಹಾಗಾಗಿಯೇ ನಮ್ಮ ನಾಡಿನಲ್ಲಿ ನೀರಿಗೆ ಬಹುಮುಖ್ಯ ಸ್ಥಾನವನ್ನು ನೀಡಿದ್ದು, ಸಕಲ ಜೀವರಾಶಿಗಳಿಗೂ ನೀರು ಅತ್ಯವಶ್ಯಕ. ಇವುಗಳ ರಕ್ಷಣೆ ನಮ್ಮೆಲ್ಲರ ಜವಾಬ್ದಾರಿಯೂ ಕೂಡ. ಹಾಗಾಗಿ ನಮ್ಮ ಜನಪದರು ನೀರಿನ ರಕ್ಷಣೆ ಹಾಗೂ ಅದರ ಬಳಕೆಯ ಮಹತ್ವ, ನಂಬಿಕೆ, ಆಚರಣೆಗಳ ಮೂಲಕ ಇಂದಿಗೂ ಜೀವಂತವಾಗಿಡಲು ಪ್ರಯತ್ನಿಸುತ್ತಿದ್ದಾರೆ. ಬದಲಾದ ಪರಿಸ್ಥಿತಿಯಲ್ಲಿ ಜನಪದರ ಈ ಮೌಲ್ಯಗಳು ಮರೆಯಾಗುತ್ತಿರುವುದೂ ಕೂಡ ಖೇದದ ಸಂಗತಿಯಾಗಿದೆ. ಅದೇನೆ ಇದ್ದರೂ ಭಾರತದಲ್ಲಿ ಸೃಷ್ಟಿಗೊಂಡಿರುವ ಪುರಾಣ–ಪುಣ್ಯ ಕತೆಗಳಲ್ಲಿ ನೀರಿಗೆ ಮಹತ್ವ ನೀಡಿರುವುದು ಕಂಡುಬರುತ್ತದೆ. ನೀರಿಗೆ ಸೃಷ್ಟಿಯನ್ನು ಕಾಪಾಡುವ ಶಕ್ತಿ ಇದೆ ಎಂಬುದು ಎಷ್ಟು ಸತ್ಯವೋ, ಅದು ಮುನಿಸಿಕೊಂಡರೆ ಜಲಪ್ರಳಯದ ಮೂಲಕ ನಾಶಮಾಡುವ ಶಕ್ತಿಯೂ ಇದೆ ಎಂಬುದು ಜಗತ್ತಿನ ಎಲ್ಲ ಜನವರ್ಗಗಳ ನಂಬಿಕೆ. ಜನಪದರು ಆಚರಿಸುವ ಇನ್ನೊಂದು ಹಬ್ಬವಾದ 'ಮಳೆ ಮಲ್ಲಪ್ಪನ ಪೂಜೆ'ಯೂ ಸಹ ನೀರಿನ ಮಹತ್ವವನ್ನು ಸಾರುತ್ತದೆ. ಪಂಚ ಭೂತಗಳಲ್ಲೊಂದಾದ ನೀರು ಜಾಗತೀಕರಣದ ಈ ಹೊತ್ತಿನಲ್ಲಿ ತನ್ನ ನೈಜತೆಯನ್ನು ಕಳೆದುಕೊಂಡಿದೆ. ಆದರೆ ಜನಪದರ ಜೀವನಾಡಿಯಾದ ನೀರು ಕೇವಲ ನೀರಾಗಿರದೆ, ಗಂಗಾಮಾತೆಯಾಗಿ, ಕೇಡುಗಳನ್ನು ಪರಿಹರಿಸುವ ತೀರ್ಥರೂಪಿಯಾಗಿ ಪೂಜ್ಯನೀಯ ಸ್ಥಾನವನ್ನು ಪಡೆದಿದೆ.

## ಪರಾಮರ್ಶನ ಗ್ರಂಥಗಳು


1. ಅಂಬಳಿಕೆ ಹಿರಿಯಣ್ಣ; ಜಾನಪದ ಪ್ರಕ್ರಿಯೆ – ಹಾಂಕೊ ದೃಷ್ಟಿ 2000, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.
2. ಅರ್ತಸಾಲಿ ವೃಷಬೇಂದ್ರಾಚಾರ್, ಮಳೆರಾಜ ಪರಂಪರೆ, ಮಂಟಪಮಾಲೆ –214, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ
3. ಅಬ್ದುಲ್ ರೆಹಮಾನ್ ಪಾಷ ಎಂ.; ನಂಬಿಕೆ, ಮೂಢನಂಬಿಕೆ, ವೈಜ್ಞಾನಿಕ ಮನೋವೃತ್ತಿ 2016, ನವಕರ್ನಾಟಕ ಪ್ರಕಾಶನ, ಬೆಂಗಳೂರು
4. ಅಮೃತ ಸೋಮೇಶ್ವರ, ತುಳುವ ಜನಪದ ಕೆಲವು ನೋಟಗಳು, 2007, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ
5. ಅಶೋಕ ಎಸ್.ಆಲೂರಾ, ಲಕ್ಷ್ಮೀಪತಿಗೌಡ ಸಿ.ಎಲ್, ಶಿವಾನಂದ ಬಿ.ಹೊಸಮನಿ, ಮಂಟಪ ಮಾಲೆ, 240, 2010, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ
6. ಕಕ್ಕಿಲ್ಲಾಯ (ಅನುವಾದಕರು) ಪ್ರಾಚೀನ ಭಾರತದಲ್ಲಿ ಭೌತಿಕವಾದ–2014, ನವಕರ್ನಾಟಕ ಪಬ್ಲಿಕೇಷನ್, ಬೆಂಗಳೂರು
7. ಕೇಶವನ್ ಪ್ರಸಾದ್.ಕೆ.ಮರಟ್ಟಿ, ಗಂಗಾಧರ ದೈವಜ್ಞ (ಸಂಪಾದಕರು), ಬುಡಕಟ್ಟು ಅಧ್ಯಯನ, ಸಂಪುಟ 5, ಸಂಚಿಕೆ 2, ಜುಲೈ ಡಿಸೆಂಬರ್ 2008, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ
8. ಕೋಸಾಂಬಿ ಡಿ.ಡಿ, ವೇಣುಗೋಪಾಲ ಶೈಲಜಾ (ಅನು), ಪ್ರಾಚೀನ ಭಾರತ ಸಂಸ್ಕೃತಿ ಮತ್ತು ನಾಗರೀಕತೆ ಚಾರಿತ್ರಿಕ ರೂಪುರೇಷೆ, 2011, ಚಿಂತನ ಪುಸ್ತಕ, ಬೆಂಗಳೂರು.
9. ಗಂಗಾಧರ ದೈವಜ್ಞ, ಗೊಂದಲಿಗರು 2010, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ
10. ಗಂಗಾಧರ ದೈವಜ್ಞ; ಕೊರಗರು– ಸಮಕಾಲೀನ ಸ್ಪಂದನ (ಸಂ) 2012, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ
11. ಗಂಗಾಧರ ದೈವಜ್ಞ, ಬುಡಕಟ್ಟು ಸಮಾಜ, ಹುಟ್ಟು ಸಾವಿನ ನಡುವೆ 2015, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ